ಎಂವಿಸಿ 1598/2019 ಪಿಡಬ್ಲ್ಯೂ 1 ನಾರಾಯಣ ಜಿ

ಸಾಕ್ಷಿಯನ್ನು ದಿನಾಂಕ 09.10.2024 ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ 1 ನೇ ಎದುರುದಾರರ ಪರ ಶ್ರೀ ಎನ್.ವಿ.ಆರ್. ವಕೀಲರಿಂದಃ

ಅಪಘಾತ ದಿನಾಂಕಃ16.06.2019 ರಂದು ಮಧ್ಯಾಹ್ನ 2.00 ಗಂಟೆಗೆ ಆಗಿರುತ್ತದೆ. ನಾವು ಅಪಘಾತವಾದ ದಿನ ಕೆಎ-55-ಎಂ-1637 ಸ್ಯಾಂಟ್ರೋ ಕಾರ್ ನಲ್ಲಿ ಹೋಗುತ್ತಿದ್ದೇವು. ಸದರಿ ಕಾರಿನಲ್ಲಿ ಡ್ರೈವರ್ ಸೇರಿ 5 ಜನ ಪ್ರಯಾಣಿಸುತ್ತಿದ್ದೇವು. ಕಾರ್ ಸಿದ್ದಯ್ಯಪುರ ಗ್ರಾಮದಿಂದ ಮೈಸೂರಿನ ಕಡೆ ಹೋಗುತ್ತಿತ್ತು, ಬಸ್ ಎದುರುನಿಂದ ಬರುತ್ತಿತ್ತು. ಬಸ್ ಆಲತ್ತೂರು ಗ್ರಾಮದ ಕಡೆಯಿಂದ ಬರಗಿ ಮಾರ್ಗವಾಗಿ ಗುಂಡ್ಲುಪೇಟೆ ಕಡೆಗೆ ಬರುತ್ತಿತ್ತು. ಸಿದ್ದಯ್ಯನ ಪುರ ಮಧ್ಯೆ ಕ್ರಾಸ್ ಇರುತ್ತದೆ. ಆ ಕ್ರಾಸ್ ಬಳಿ ನಮ್ಮ ಕಾರ್ ಚಾಲಕ ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ಬರುತ್ತಿದ್ದ ಬಸ್ ಗೆ ಡಿಕ್ಕಿಪಡಿಸಿ ಅಪಘಾತ ಉಂಟು ಮಾಡಿದ ಎಂದರೆ ಸುಳ್ಳು. ಸದರಿ ಕಾರಿನಲ್ಲಿ ಹಿಂದೆ ಕುಳಿತ್ತಿದ್ದೆ. ಕಾರ್ ಚಲಾಯಿಸುತ್ತಿದ್ದ ಮನೋರಾಜ್ ಜೆ. ರವರು ನನ್ನ ಅಣ್ಣನ ಮಗನಾಗಬೇಕು. ಅದರ ಮಾಲೀಕ ಯಾರು ಎಂದು ಗೊತ್ತಿಲ್ಲ. ನನ್ನ ಅಣ್ಣನ ಮಗನಿಗೆ ಡಿ.ಎಲ್ ಇರುತ್ತದೆ ಅದನ್ನು ಹಾಜರುಪಡಿಸಿರುತ್ತಾರೆ. ನನ್ನ ಅಣ್ಣನ ಮಗನ ಡಿಎಲ್ ನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಪಟ್ಟಂತೆ ದೂರನ್ನು ಗಣಪತಿ ಎನ್ನುವವವರು ಕೊಟ್ಟಿರುತ್ತಾರೆಂದು ಪ್ರಥಮ ವರ್ತಮಾನ ವರದಿಯನ್ನು ತೋರಿಸಿ ಕೇಳಲಾಗಿ, ಸಾಕ್ಷಿಯು ಕೊಟ್ಟಿರಬಹುದು ನನ್ನ ಗಮನಕ್ಕೆ ಇದ್ದಂತೆ ಮೂರ್ತಿ ಎನ್ನುವಾರು ದೂರನ್ನು ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ದೂರನ್ನು ತೆಗೆದುಕೊಂಡು ಸಿ.ಆರ್. ನಂ.110/2019 ಎಂದು ಎಫ್.ಐ.ಆರ್. ನ್ನು ದಾಖಲಿಸಿರುತ್ತಾರೆಂದರೆ ಸರಿ. ಆ ಪ್ರಕಾರವಾಗಿ ನನ್ನ ಅಣ್ಣನ ಮಗ ಹಾಗೂ ನನ್ನ ಸ್ನೇಹಿತ ರಾಜೇಶ್ ರವರು ಮಾತ್ರ ಪರಿಹಾರ ಕೊಡಲು ಹೊಣೆಗಾರರಾಗಿರುತ್ತಾರೆ, ಕೆ.ಎಸ್.ಆರ್.ಟಿ.ಸಿ ಸಂಸ್ಥೆಯವರು ಪರಿಹಾರ ಕೊಡಲು ಹೊಣೆಗಾರರಾಗಿರುವುದಿಲ್ಲ ಎಂದರೆ ಸುಳ್ಳು. ನಿಪಿ.6 ಗಾಯದ ಪ್ರಮಾಣ ಪತ್ರದಲ್ಲಿ ಸಮಯ ಮಧ್ಯಾಹ್ನ 3.00 ಗಂಟೆ ಎಂದು ನಮೂದು ಇದೆ ಎಂದರೆ ಸರಿ. ಆ ಸಮಯವನ್ನು ನಾನೇ ಹೇಳಿ ಬರೆಸಿರುತ್ತೇನೆಂದರೆ ಸುಳ್ಳು. ನನ್ನ ಅಣ್ಣನ ಮಗನ ತಪ್ಪಿನಿಂದ ಅಪಘಾತ ಉಂಟಾಗಿದ್ದು, ಆತನಿಗೆ ಡಿಎಲ್ ಇಲ್ಲದೇ ಇದ್ದುದ್ದರಿಂದ ಪರಿಹಾರ ಬರುವುದಿಲ್ಲ ಎಂದು ಗೊತ್ತಾದ ಮೇಲೆ ಕೆ.ಎಸ್.ಆರ್.ಟಿ.ಸಿ ಬಸ್ ಚಾಲಕ

ದೂರು  ನಿಡೀದ ನಂತರ ಸದರಿ ಬಸ್ ಚಾಲಕನ ವಿರುದ್ಧ ಸುಳ್ಳು ದೂರು ಕೊಟ್ಟಿರುತ್ತೇವೆಂದರೆ ಸರಿಯಲ್ಲ. ಕೆಎ-55-ಎಂ-1637 ಸ್ಯಾಂಟ್ರೋ ಕಾರ್ ಗೆ ವಿಮೆ ಇರುತ್ತದೆ. ಯಾವ ಕಂಪನಿಯದ್ದು ಎಂದರೆ ನನಗೆ ಗೊತ್ತಿಲ್ಲ. ಕೆಎ-55-ಎಂ-1637 ಸ್ಯಾಂಟ್ರೋ ಕಾರಿನ ವಿಮಾ ಕಂಪನಿಯಿಂದ  ಪರಿಹಾರ ಪಡೆದುಕೊಳ್ಳಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಕೆಎ-55-ಎಂ-1637 ಸ್ಯಾಂಟ್ರೋ ಕಾರಿನಿಂದ ಯಾವುದೇ ತಪ್ಪು ಉಂಟಾಗಿಲ್ಲ ಎಂದು ನುಡಿಯುತ್ತಾರೆ. ಕ್ರೈಂ ನಂ. 110 ರಲ್ಲಿ ತಿಳಿಸಿದ ಪ್ರಕಾರವೇ ಈ ಘಟನೆ ಆಗಿರುತ್ತದೆಂದರೆ ಸುಳ್ಳು. ಸದರಿ ಅಪಘಾತದಲ್ಲಿ ನಮಗೆ ಸಣ್ಣ-ಪುಟ್ಟ ಗಾಯಗಳು ಆಗಿರುತ್ತವೆಂದರೆ ಸರಿಯಲ್ಲ.

2. ಸ್ಥಳ ಮಹಜರ್ ನ್ನು ದಿನಾಂಕಃ17.06.2019 ರಂದು ಮಾಡಿರುತ್ತಾರೆಂದರೆ ಸರಿ. ಸದರಿ ಮಹಜರ್ ಮಾಡುವಾಗ ಗಣಪತಿಯವರು  ಸ್ಥಳವನ್ನು ತೋರಿಸಿದ್ದರೆಂದು ಕ್ರೈಂ.ನಂ.110 ರಲ್ಲಿ ನಮೂದು ಇರುತ್ತದೆಂದರೆ ಸರಿ. ಸದರಿ ಮಹಜರ್ ನಲ್ಲಿ ಪೋಲೀಸರು  ಸಹಿ ಮಾಡಿರುತ್ತಾರೆಂದರೆ ಸರಿ.

3. ನನಗೆ ಪಡಿತರ ಚೀಟಿ ಇರುತ್ತದೆ.  ನನ್ನ ಹೆಸರು ನಾರಾಯಣ ಜಿ. ಎಂದು ಇರುತ್ತದೆ. ನಿಪಿ.3 ಮತ್ತು 4 ಮಹಜರ್ ಮತ್ತು ಸ್ಕೆಚ್  ಪ್ರಕಾರ ರಸ್ತೆಯ ಮಧ್ಯೆ ಭಾಗದಲ್ಲಿ ಅಪಘಾತ ಉಂಟಾಗಿರುತ್ತದೆಂದರೆ ಸುಳ್ಳು. ನಾನು ಸದರಿ ದಾಖಲೆಯನ್ನು ಸರಿ ಇಲ್ಲ ಎಂದು ಪೋಲಿಸರಿಗೆ ಪ್ರಶ್ನೆ ಮಾಡಿ ಕೇಳಿಲ್ಲ. ಸದರಿ ದಾಖಲೆಯನ್ನು ನಾನು ನೋಡಿಯೇ ಹಾಜರುಪಡಿಸಿರುತ್ತೇನೆ.  ಘಟನೆ ಎಂವಿಸಿ ನಂ.1597/2019 ರಲ್ಲಿ ನಿಶಾನೆಯಾಗಿ ಗುರುತಿಸಲಾದ ನಿ.ಆರ್ 2 ರಲ್ಲಿ ನಮೂದಿಸಿರುವ ರೀತಿಯೇ ಆಗಿರುತ್ತದೆ. ಸದರಿ ಅಪಘಾತ ಕೆ.ಎಸ್.ಆರ್.ಟಿ.ಸಿ. ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಸ್ಯಾಂಟ್ರೊ ಕಾರ್ ಗೆ ವಿಮೆ ಇತ್ತು, ಯಾವ ಕಂಪನಿಯಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಕಾರಿನ ಮಾಲೀಕ ನಮ್ಮ ಊರಿನವರಾಗಿದ್ದು,  ಸದರಿ ಕಾರಿನ ಮಾಲೀಕರೊಂದಿಗೆ ಸಮಾಲೋಚನೆ ಮಾಡಿ ನಂತರ ಮೂರ್ತಿರವರು ದೂರು  ಕೊಟ್ಟರು ಎಂದರೆ ಸುಳ್ಳು. ನಾನು ಸದರಿ ಕಾರಿಗೆ ವಿಮೆ ಇರುವುದನ್ನು ಸರಿಯಾಗಿ ತಿಳಿದುಕೊಂಡ ನಂತರವೇ ಸಾಕ್ಷಿ ಹೇಳಲು   ಬಾಕ್ಸಿಗೆ ಬಂದಿರುತ್ತೇನೆಂದರೆ ಸರಿ. ಸದರಿ ಪಾಲಿಸಿಯ ನಂಬರ್ ಮತ್ತು ಕಂಪನಿಯ ಹೆಸರು ನನಗೆ ಗೊತ್ತಿಲ್ಲ. ಕ್ರೈಂ ನಂ.110 ರ ಪ್ರಕಾರವೇ ಘಟನೆ ಆಗಿದೆ ಎಂದರೆ ಸುಳ್ಳು. ನಾನು ಕ್ರೈಂ ನಂ.111 ನ್ನು ನೋಂದಾಯಿಸುವ ಪೂರ್ವದಲ್ಲಿಯೇ ಕ್ರೈಂ ನಂ.110 ನೋಂದಾಯಿಸ್ಪಟ್ಟಿತ್ತು ಎಂದರೆ ಸರಿ.  ಕ್ರೈಂ ನಂ.110 ರ ಬಗ್ಗೆ ದೂರು

ಕೊಟ್ಟಿರುವ ವಿಚಾರ ನನಗೆ ಗೊತ್ತಿತ್ತು. ಆ ದೂರು ಸರಿ ಇರಲಿಲ್ಲ ಎಂದು ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ. ಸುಳ್ಳು ದೂರು ಕೊಟ್ಟಿರುತ್ತಾರೆಂದು ದೂರು ಕೊಡಲು ಹೋದಾಗ ನಮೂದಿಸಿಲ್ಲ. ಆ ಸಂಬಂಧ ಪೋಲಿಸರು ನನ್ನ ಹೇಳಿಕೆ ತೆಗೆದುಕೊಂಡಿಲ್ಲ. ಪೋಲಿಸರು ನನ್ನ ಹೇಳಿಕೆಯನ್ನೇ ಪಡೆದುಕೊಂಡಿಲ್ಲ.

4. ಅಪಘಾತವಾದ ದಿನ ಆಸ್ಪತ್ರೆಗೆ ಮದ್ಯಾಹ್ನ 3.30 ರಿಂದ 4.00 ಗಂಟೆ ಸಮಯದಲ್ಲಿ ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ಅಪಘಾತ ಹೇಗೆ ಉಂಟಾಯಿತು ಮತ್ತು ಗಾಯಗಳು ಹೇಗೆ ಉಂಟಾದವು ಎಂದು ನಾನು ಹೇಳಿ ಬರೆಸಿರುವುದಿಲ್ಲ. ನಾನು ಯಾವಾಗಲೂ ವಾಚ್ ಕಟ್ಟುತ್ತೇನೆ. ಅಪಘಾತವಾದಾಗ ಮಧ್ಯಾಹ್ನ 1.30 ರಿಂದ 2.00 ಗಂಟೆಯಾಗಿತ್ತು. ಅಪಘಾತವಾದ ದಿನಾಂಕ 16.06.2019 ಇರುತ್ತದೆ. ಅಪಘಾತವಾದ ತಕ್ಷಣ ಮೊದಲು ಕೆ ಆರ್ ಆಸ್ಪತ್ರೆಗೆ ಹೋಗಿರುತ್ತೇವೆ. ಆಸ್ಪತ್ರೆಗೆ ಹೋದಾಗ ಅಪಘಾತದಲ್ಲಿ ಗಾಯಗಳು ಹೇಗೆ ಉಂಟಾದವು ಎಂದು ನಾನೇ ಹೇಳಿ ಬರೆಸಿರುತ್ತೇನೆಂದರೆ ಸಾಕ್ಷಿ ನನಗೆ ಪ್ರಜ್ಞೆ ಇರಲಿಲ್ಲ ಎಂದು ನುಡಿಯುತ್ತಾರೆ. ಕೆ ಆರ್ ಆಸ್ಪತ್ರೆಗೆ ಹೋದಾಗ ನನಗೆ ಪ್ರಜ್ಞೆ ಇರಲಿಲ್ಲ ಎಂದು ನನ್ನ ಅರ್ಜಿಯಲ್ಲಾಗಲೀ, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ನಾನು ಹೇಳಿ ಬರೆಸಿರುವುದಿಲ್ಲ. ನಾನು ಪೊಲೀಸರಿಗೆ ಆ ರೀತಿ ಹೇಳಿಕೆ ಕೊಟ್ಟಿಲ್ಲ. ನಾನು ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲೂ ಸಹ ಆಸ್ಪತ್ರೆಗೆ ಹೋದಾಗ ಪ್ರಜ್ಞೆ ಇಲ್ಲ ಎಂದು ಹೇಳಿದ ಬಗ್ಗೆ ನೆನಪಿಲ್ಲ. ಆಸ್ಪತ್ರೆಗೆ ಹೋದಾಗ ಗಾಯಾಳುವಿಗೆ ಪ್ರಜ್ಞೆ ಇರದಿದ್ದರೆ unconscious ಎಂದು ನಮೂದು ಮಾಡುತ್ತಾರೆಂದರೆ ಸರಿ. ಪ್ರಜ್ಞೆ ಇರಲಿಲ್ಲ ಎಂದು ಪೊಲೀಸರು ಎಲ್ಲೂ ಸಹ ಹೇಳಿರುವುದಿಲ್ಲ ಎಂದರೆ ನನಗೆ ಜ್ಞಾಪಕ ಇಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳನ್ನು ಓದಿ ತಿಳಿದುಕೊಂಡೇ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ನನಗೆ ಪ್ರಜ್ಞೆ ಇರಲಿಲ್ಲ ಎಂದು ನಮೂದಿಸಿದ ಬಗ್ಗೆ ಕಂಡುಬಂತಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ದಾಖಲೆಗಳಲ್ಲಿ ಆ ರೀತಿ ನಮೂದು ಇರುವುದಿಲ್ಲ ಎಂದರೆ ನಗನೆ ಗೊತ್ತಿಲ್ಲ. ನನಗೆ ಪ್ರಜ್ಞೆ ಇರಲಿಲ್ಲ ಎಂದು ನಮೂದು ಮಾಡದೇ

ಇರುವುದು ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತ 3.00 ಗಂಟೆ ಸಮಯದಲ್ಲಿ ಆಗಿರಬಹುದೆಂದು ನಮೂದು ಮಾಡಿಸಿರಬಹುದು. ಕೆ ಆರ್ ಆಸ್ಪತ್ರೆಗೆ ಹೋದಾಗ ಅಪಘಾತ ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಆಗಿದೆ ಎಂದು ಎಂ ಎಲ್ ಸಿ ಯಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿಯು ಎಂ ಎಲ್ ಸಿ ದಾಖಲೆ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ ಆರ್ 3 ಎಂದು ಗುರುತಿಸಲಾಯಿತು. ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ನಾನು ಕಾರಿನಲ್ಲಿ ಹೋಗುವಾಗ ನಾನು ಚೆನ್ನಾಗಿದ್ದೆ. ಮಧ್ಯಾಹ್ನ ಅಪಘಾತವಾಗಿದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ 2.00 ಗಂಟೆ ಎಂದು ನಮೂದು ಇರುವುದು ಸರಿ ಇಲ್ಲ ಎಂದರೆ ಸಾಕ್ಷಿಯು 2.00 ರಿಂದ 3.00 ಗಂಟೆ ಸಮಯದಲ್ಲಿ ಅಪಘಾತವಾಗಿದೆ ಎಂದು ನುಡಿಯುತ್ತಾರೆ. ಅಪಘಾತ ನಮ್ಮ ತಪ್ಪಿನಿಂದಲೇ ಉಂಟಾಗಿರುವುದರಿಂದ ಪರಿಹಾರ ಪಡೆಯು ಉದ್ದೇಶಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾಹನಗಳು ಯಾವ ಕ್ರೈ ನಂ. ನಡಿಯಲ್ಲಿ ಜಪ್ತು ಆಗಿದ್ದವು ಎಂದು ನನಗೆ ಗೊತ್ತಿಲ್ಲ.

5. ಎರಡು ವಾಹನಗಳನ್ನು ಕ್ರೈನಂ.110 ರಲ್ಲಿ ಜಪ್ತುಪಡಿಸಿಕೊಳ್ಳಲಾಗಿತ್ತು ಎಂದರೆ ಸಾಕ್ಷಿ ನಿಪಿ 5 ವರದಿಯನ್ನು ನೋಡಿ ಅದರ ಪ್ರಕಾರ ನಮೂದು ಇದೆ ಎನ್ನುತ್ತಾರೆ. ಕ್ರೈನಂ.111 ರಲ್ಲಿ ಪೊಲೀಸರು ಯಾವುದೇ ವಾಹನವನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿ. ಪೊಲೀಸರು ನಮ್ಮೊಂದಿಗೆ ಶರೀಕ್ಕಾಗಿ ನಮಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ಕ್ರೈ ನಂ.110 ರಲ್ಲಿ ಬಿ ರಿಪೋರ್ಟ್ ಸಲ್ಲಿಸಿರುತ್ತಾರೆಂದರೆ ಸುಳ್ಳು. ನಾವು 4 ಜನರು ಪೋಲೀಸ್ ಅಧಿಕಾರಿಗಳಿಂದ ತನಿಖಾಧಿಕಾರಿಗಳ ಮೇಲೆ ಪ್ರಭಾವ ಬೀರಿ ಬಿ ವರದಿ ಸಲ್ಲಿಸಲು ಕಾರಣಕರ್ತರಾಗಿದ್ದೇವೆಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ಸಿಗೆ ಯಾವಾಗಲೂ ವಿಮೆ ಇರುತ್ತದೆ, ಪರಿಹಾರ ಬರುತ್ತದೆ ಎನ್ನುವ ಉದ್ದೇಶಕ್ಕಾಗಿ ಸದರಿ ಬಸ್ ಚಾಲಕನ ವಿರುದ್ಧ ನಮ್ಮ ಪ್ರಭಾವ ಬಳಸಿ ದೋಷಾರೋಪಣಾ ಪಟ್ಟಿ ಬರೆಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ6 ರಲ್ಲಿ

ನಮೂದಿಸಿರುವ ಗಾಯಗಳೇ ನನಗೆ ಆಗಿರುತ್ತವೆ ಎಂದರೆ ಸರಿ. ಆ ಕಾರಣಕ್ಕಾಗಿ ಎಲ್ಲಾ ಕೆಲಸ-ಕಾರ್ಯಗಳನ್ನು ಮಾಡುತ್ತಿದ್ದೇನೆಂದರೆ ಸಾಕ್ಷಿ ಸ್ವಲ್ಪ ಕಷ್ಟ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಗಾಯಗಳು ಉಂಟಾಗಿರಲಿಲ್ಲ ಪರಿಹಾರ ಬರಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಒಳರೋಗಿ ಆಗಿ ಇದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ನಾನು ಯಾವುದೇ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿದ್ದಾಗ 2,00,000/- ಔಷಧಿ ಉಪಚಾರಕ್ಕೆ, ಹೊರರೋಗಿಯಾಗಿ ಚಿಕಿತ್ಸೆಗೆ ಹೋದಾಗ ಪ್ರತಿಬಾರಿ 2500/-, ರೂ., ಭವಿಷ್ಯದ ಚಿಕಿತ್ಸೆಗೆ 1,00,000/- ರೂ. ಖರ್ಚಾಗುತ್ತದೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.ನಾನು ತಿಂಗಳಿಗೆ 20,000/- ರೂ. ಸಂಪಾದನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಬಿಪಿಎಲ್ ಕಾರ್ಡ್ ಇರುತ್ತದೆ. ಬಿಪಿಎಲ್ ಕಾರ್ಡ್ ಇದ್ದವರಿಗೆ ಸರಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡುತ್ತಾರೆಂದರೆ ಸರಿ., ಸಾಕ್ಷಿ ಮುಂದುವರೆದು ಹೊರಗಡೆ ಔಷಧಿ ತರಬೇಕಾಗುತ್ತದೆಂದು ನುಡಿಯುತ್ತಾರೆ. ಹೊರಗಡೆ ಔಷಧಿ ತರಲು ಔಷಧಿ ಚೀಟಿನೀಡಿ ಕಳುಹಿಸುತ್ತಾರೆಂದರೆ ಸರಿ ಆ ರೀತಿ ಔಷಧಿ ಚೀಟಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಆ ಕಾರಣಕ್ಕಾಗಿ ಹೊರಗಡೆ ಔಷಧಿ ತಂದಿರುವುದಿಲ್ಲ ಮತ್ತು ದಾಖಲೆ ಹಾಜರು ಮಾಡಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳು ಹೆಚ್ಚಿಗೆ ಪರಿಹಾರ ಬರಲು ಎಂದು ಸೃಷ್ಟಿಸಿ ಹಾಜರುಪಡಿಸಿರುವ ದಾಖಲೆಗಳು ಎಂದರೆ ಸರಿಯಲ್ಲ. ಅಪಘಾತವಾದಗ ನನಗೆ 61 ವರ್ಷ ವಯಸ್ಸಾಗಿತ್ತು.

**<u>ಮರುವಿಚಾರಣೆಃ</u>** ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ ಮತ್ತು ಎಂಎಸಿಟಿ, ಶ್ರೀರಂಗಪಟ್ಟಣ